ಸಾರಾಯಿ ನಿಷೇಧದಿಂದ ಸರ್ಕಾರದ ರಾಜಸ್ವ ನಷ್ಟವಾಗಲಿದೆ. ಆದರೆ ಸರ್ಕಾರಕ್ಕೆ ದೊರಕಬಹುದಾದ ಹೆಚ್ಚಿನ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ನಷ್ಟವನ್ನು ಅನುಭವಿಸಲು ತಯಾರಿದೆ. ಸ್ವಲ್ಪಮಟ್ಟಿಗೆ ಸರ್ಕಾರದ ಖರ್ಚನ್ನು ಕಡಿಮೆ ಮಾಡಿ, ಅಲ್ಲದೆ ಬೇರೆ ರಾಜಸ್ವಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಈ ಖರ್ಚನ್ನು ಸರ್ಕಾರವು ಭರಿಸಲು ಚಿಂತನೆ ನಡೆಸಿದೆ.

792 (1000) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಕ್ಷೇತ್ರದ ಕೈಗಾರಿಕಾ ಬೆಳವಣಿಗೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

ಆ) ಈ ಕಾರ್ಯಕ್ಕೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು ;

ಇ) ಈ ಕ್ಷೇತ್ರದಲ್ಲಿ ಯಾವ ವಿವಿಧ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಜಿಸಿದೆ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) 1) ಕೆ.ಐ.ಎ.ಡಿ.ಬಿ. ವತಿಯಿಂದ ಇದುವರೆವಿಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಕೆಳಗಿನಂತೆ ಕೈಗಾರಿಕಾ ಪ್ರದೇಶ ಮತ್ತು ಏಕ ಘಟಕ ಸಂಕೀರ್ಣಗಳಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಕಲಂ 28(4) ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

	ಎ–ಗು
ಕೈಗಾರಿಕಾ ಪ್ರದೇಶ	128.02
ಏಕ ಘಟಕ	261.28
ಒಟ್ಟು	**389.30**

ಎ) ಚಿಕ್ಕಮಗಳೂರು ತಾಲ್ಲೂಕು ಅಂಬ್ಲೆ ಗ್ರಾಮದಲ್ಲಿ ಈಗಾಗಲೇ 47–16 ಎಕರೆ ಪ್ರದೇಶವನ್ನು ಕೈಗಾರಿಕಾ ಪ್ರದೇಶವನ್ನಾಗಿ (1ನೇ ಹಂತ ಮಿನಿ ಗ್ರೋಥ್ ಸೆಂಟರ್) ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ ಈಗಾಗಲೇ 14 ಉದ್ದಿಮೆದಾರರಿಗೆ ಕಾಫಿಕ್ಯೂರಿಂಗ್, ವುಡ್, ಕೆಮಿಕಲ್, ವೇರ್‌ಹೌಸಿಂಗ್ ಘಟಕ ಸ್ಥಾಪನೆಗಾಗಿ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಬಿ) ಸದರಿ ಕ್ಷೇತ್ರದಲ್ಲಿ 2ನೇ ಹಂತವಾಗಿ ಜನರಲ್ ಕೈಗಾರಿಕಾ ಪ್ರದೇಶವನ್ನು2007–08ನೇ ಸಾಲಿನಲ್ಲಿ 80.86 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಮಂಡಳಿಯು ಯೋಜಿಸಿದೆ.

ಸಿ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಪಡೇರಹಳ್ಳಿ ಗ್ರಾಮದಲ್ಲಿ 116 ಎಕರೆ 01 ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ

ಭೂಸ್ವಾಧೀನಪಡಿಸಿಕೊಳ್ಳಲು ಕಲಂ 3(1), 1 (3) ಹಾಗೂ 28(1) ರನ್ವಯ ಪ್ರಾರಂಭಿಕ ಅಧಿಸೂಚನೆಯನ್ನು ದಿನಾಂಕ: 07.12.2006 ರಂದು ಹೊರಡಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯು ಚಾಲ್ತಿಯಲ್ಲಿದೆ.

2) ಚಿಕ್ಕಮಗಳೂರು ಕ್ಷೇತ್ರದ ಕೈಗಾರಿಕಾ ಬೆಳವಣಿಗೆಗಾಗಿ ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಚಿಕ್ಕಮಗಳೂರು – ಕಡೂರು ರಸ್ತೆಯಲ್ಲಿ 13.45 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತುಗಳನ್ನು 1972ನೇ ಇಸವಿಯಲ್ಲಿ ಸ್ಥಾಪನೆ ಮಾಡಿ 28 ಕೈಗಾರಿಕಾ ಮಳಿಗೆಗಳನ್ನು (2 ಸಿ ಮಾದರಿ, 16–ಡಿ ಮಾದರಿ 4–ಎಸ್ ಎಂ ಮಾದರಿ ಹಾಗೂ 6 ಮಿನಿ ಮಾದರಿ) ನಿರ್ಮಿಸಲಾಗಿದೆ ಹಾಗೂ 74 ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಅರ್ಹ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ. ಆದಾಗ್ಯೂ ವಿವಿಧ ಮಾದರಿಯ 8 ಮಳಿಗೆಗಳು ಮತ್ತು ವಿವಿಧ ಮಾದರಿಯ 23 ನಿವೇಶನಗಳು ಖಾಲಿ ಇವೆ. ಮುಂದುವರೆದಂತೆ, ಚಿಕ್ಕಮಗಳೂರು ಪಟ್ಟಣದಲ್ಲಿ ಎರಡನೇ ಹಂತದ ಕೈಗಾರಿಕಾ ವಸಾಹತು ಸ್ಥಾಪಿಸಲು, ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದಲ್ಲಿ 25 ಎಕರೆ ಜಮೀನನ್ನು ಗುರುತಿಸಲಾಗಿದೆ.

ಆ) ಎ) ಅಂಬ್ಲೆ ಕೈಗಾರಿಕಾ ಪ್ರದೇಶದ 1ನೇ ಹಂತ ಮಿನಿ ಗ್ರೋಥ್ ಸೆಂಟರ್ ಯೋಜನೆಯಡಿ ಅಭಿವೃದ್ಧಿಪಡಿಸಲು ಸರ್ಕಾರವು ಒಂದು ನೂರು ಲಕ್ಷ ಅನುದಾನ ಒದಗಿಸಿರುತ್ತದೆ.

ಬಿ) ಸದರಿ ಕೈಗಾರಿಕಾ ಪ್ರದೇಶಕ್ಕೆ ಎನ್.ಹೆಚ್. 57 ರಸ್ತೆಯ ಹಿರೆಮಗಳೂರು ಅಂಬ್ಲೆ ಕ್ರಾಸ್ನಿಂದ ಸಂಪರ್ಕ ಒದಗಿಸಲು ಅಸೈಡ್ ಯೋಜನೆಯಡಿ ರೂ 145.00 ಲಕ್ಷಗಳ ಅನುದಾನಕ್ಕೆ ಅನುಮೋದನೆ ದೊರಕಿರುತ್ತದೆ. ಹಣ ಇನ್ನೂ ಬಿಡುಗಡೆಯಾಗಿರುವುದಿಲ್ಲ.

ರೂ. 11.79 ಲಕ್ಷಗಳಲ್ಲಿ 2 ಸಿ ಮಾದರಿ, 4 ಡಿ ಮಾದರಿ ಮಳಿಗೆಗಳನ್ನು ನಿರ್ಮಿಸಲಾಗಿದೆ. ರೂ. 35.15 ಲಕ್ಷಗಳ ವೆಚ್ಚದಲ್ಲಿ 4 "ಡಿ", 8 "ಎಂ" ಮಾದರಿಯ ಮಳಿಗೆಗಳನ್ನು ಮತ್ತು ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಿದೆ.

ಇ) ಜಿಲ್ಲೆಯಲ್ಲಿ ಹೇರಳವಾಗಿ ಲಭ್ಯವಿರುವ ಸಂಪನ್ಮೂಲಗಳು ಅಂದರೆ ಕಾಫಿ, ಅಡಿಕೆ, ತೆಂಗು, ಮೆಣಸು, ಟೊಮೆಟೋ, ಆಲೂಗಡ್ಡೆ ಹಣ್ಣು ಮತ್ತು ತರಕಾರಿಗಳು ಹಾಗೂ ಜಿಲ್ಲೆಯಲ್ಲಿ ಬೇಡಿಕೆಯ ಆಧಾರದ ಮೇಲೆ ಕೃಷಿ ಮತ್ತು ಆಹಾರ ಸಂಸ್ಕರಣಾ, ಜವಳಿ, ಪ್ರವಾಸೋದ್ಯಮ ಸಂಬಂಧಿಸಿದ ಚಟುವಟಿಕೆಗಳು, ಜನರಲ್ ಇಂಜಿನಿಯರಿಂಗ್, ಶೀತಲಗಾರ, ಹಣ್ಣು ಸಂಸ್ಕರಣೆ, ಟೊಮೆಟೋ ಪೇಸ್ಟ್, ಹರ್ಬಲ್ಸ್ ಎಸ್ಟ್ರಾಶನ್, ಹೈಟೆಕ್ ನರ್ಸರಿ ಇತ್ಯಾದಿ ಘಟಕಗಳನ್ನು ಪ್ರಾರಂಭಿಸಲು ಉತ್ತಮ ಅವಕಾಶವಿದೆಯೆಂದು ಗುರುತಿಸಲಾಗಿದೆ.

ಇದಲ್ಲದೆ, ಡಾ: ಡಿ.ಎಮ್. ನಂಜುಂಡಪ್ಪನವರ ವರದಿಯ ಪ್ರಕಾರ ಕಡೂರು ತಾಲ್ಲೂಕನ್ನು ಅತೀ ಹಿಂದುಳಿದ ತಾಲ್ಲೂಕೆಂದು ಪರಿಗಣಿಸಿದ್ದು, ಹೊಸದಾಗಿ

ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ಉಪ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

793 (1106) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈ ರಾಜ್ಯದ ಅಕ್ರಮ ಸಾಗುವಳಿದಾರರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಅಕ್ರಮ ಸಾಗುಳಿದಾರರನ್ನು ಸಕ್ರಮಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

ಇ) ರಚನೆಯಾಗಿರುವ ಅಕ್ರಮ ಸಕ್ರಮ ಸಮಿತಿಗಳೆಷ್ಟು ; ಈ ಸಮಿತಿ ಚಿಕ್ಕಮಗಳೂರು ಜಿಲ್ಲೆಯ ಅರ್ಜಿದಾರರ ಸಂಖ್ಯೆ ಎಷ್ಟು ;

ಈ) ಈ ಗೋಮಾಳ ಜಮೀನಿನಲ್ಲಿರುವ ಅಕ್ರಮ ಸಾಗುವಳಿದಾರರ ಸಮಸ್ಯೆಗೆ ಸರ್ಕಾರ ಪರಿಹಾರ ಸೂತ್ರವೇನು ;

ಉ) ಚಿಕ್ಕಮಗಳೂರಿನ ವಿವಾದಿತ ಸಾಗುವಳಿ ಪ್ರದೇಶದಲ್ಲಿ ಕಂದಾಯ ಹಾಗೂ ಅರಣ್ಯ ಭೂಮಿ ಗಡಿ ಗುರುತಿಸುವ ಕಾರ್ಯ ಆಗಿದೆಯೇ ;

ಊ) ಹಾಗಿದ್ದಲ್ಲಿ, ಯಾವಾಗಿನಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ ;

ಋ) ಸಾರಗೋಡು ಮಸಗಲಿ ಅರಣ್ಯ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಂದಾಯ ಕಾರ್ಯದರ್ಶಿಯವರ ಜಾಮದಾರ್ ನೀಡಿದ ವರದಿಯಲ್ಲಿರುವ ಅಂಶಗಳೇನು ;

ಎ) ಈ ವರದಿಯನ್ನು ಅನುಷ್ಟಾನಗೊಳಿಸಲಾಗಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಎ ಮತ್ತು 94ಬಿ ಪ್ರಕಾರ ಒತ್ತುವರಿದಾರರ ಕುಟುಂಬವು ಹೊಂದಿರುವ ಜಮೀನು ಸೇರಿ ಒಟ್ಟು 4.38 ಎಕರೆ ಖುಷ್ಕಿ ಜಮೀನಿಗೆ ಸಮನಾದ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶವಿದೆ. ಈ ಉದ್ದೇಶಕ್ಕೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಪ್ರತಿಯೊಂದು ತಾಲ್ಲೂಕಿಗೆ ರಚಿಸುತ್ತಿದ್ದು, ಈ ಸಮಿತಿಯು ನಿಯಮಾನುಸಾರ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಇ) ರಾಜ್ಯದಲ್ಲಿ ಈಗಾಗಲೇ 100 ತಾಲ್ಲೂಕುಗಳಿಗೆ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಲಾಗಿದೆ.